

## ದಾನಶೂರ ಭಾರತ

ನಾವು ಜನರನ್ನು ಸ್ವಾರ್ಥಿಗಳು, ನಿಷ್ಕರುಣೆಗಳು ಎಂದು ದೂಷಿಸುತ್ತೇವೆ. ನಾವು ದಿನಪತ್ರಿಕೆಯನ್ನು ಓದಿದಾಗ ಸಮಾಜದ ಕೆಟ್ಟ ಮುಖವೇ ನಮ್ಮ ಮುಖಕ್ಕೆ ಎರಚಿದಂತೆ ಕಾಣುತ್ತದೆ. ಈ ವೃತ್ತಪತ್ರಿಕೆಗಳ ಆಧಾರದ ಮೇಲೆ ಸಮಾಜದ ಸ್ವರೂಪವನ್ನು ನಿರ್ಣಯಿಸಲಾಗುವುದಿಲ್ಲ, ಜನರ ನಿಜವಾದ ಸ್ವಭಾವವನ್ನು ಅಳೆಯಲಾಗುವುದಿಲ್ಲ.

ನಮ್ಮದು ಬಡದೇಶ, ಇಲ್ಲಿನ ಹೆಚ್ಚಿನ ಜನರು ಬಡವರು. ಆದರೆ ಅವರ ಹೃದಯ ಶ್ರೀಮಂತ. ಒಟ್ಟು ಭಾರತದಲ್ಲಿ ೭೫ ಮಿಲಿಯನ್ ಕುಟುಂಬಗಳು ಪ್ರತಿವರ್ಷ ಹಣ ಅಥವಾ ವಸ್ತು ರೂಪದಲ್ಲಿ ದಾನ ಮಾಡುತ್ತಾರೆಂದು ಒಂದು ವರದಿ ತಿಳಿಸುತ್ತದೆ.(ನೋಡಿ : *The Hindu* 4.3.2003). ದಾನಿಗಳಲ್ಲಿ ಮೂರನೆ ಎರಡು ಭಾಗ ಗ್ರಾಮಾಂತರ ಪ್ರದೇಶದವರು. ೧೯೯೯-೨೦೦೦ರ ಸಾಲಿನಲ್ಲಿ ಭಾರತೀಯರು ೪೨, ೪೩೩ ಮಿಲಿಯನ್ ರೂಪಾಯಿ ದಾನ ಮಾಡಿದ್ದಾರಂತೆ. ಇದರಲ್ಲಿ ಶೇಕಡ ೮೭ ಭಾಗ ವಾರ್ಷಿಕ ವರಮಾನ ಒಂದು ಲಕ್ಷ ರೂ. ಅಥವಾ ತಿಂಗಳಿಗೆ ೮,೦೦೦ ರೂ ವರಮಾನಕ್ಕಿಂತ ಕೆಳಗಿರುವವರಿಂದ ಬಂದಿದೆ ಎಂದರೆ ಆಶ್ಚರ್ಯವಾಗುತ್ತದೆ.

ಬಡವರೇ ಹೆಚ್ಚು ಉದಾರಿಗಳಾಗಿರುತ್ತಾರೆ. ಬಡ ಮನೆಗೆಲಸದವಳು ತನ್ನ ಸಂಬಳದಲ್ಲಿ ಉಳಿಸಿ ನೀಡಿದ ಹಣದಿಂದ ಮೈಸೂರು ರಾಮಕೃಷ್ಣ ಆಶ್ರಮದ ಪ್ರಾರಂಭಾವಸ್ಥೆಯಲ್ಲಿ ಅದಕ್ಕೆ ತಂತಿ ಬೇಲಿ ಕಟ್ಟಿಸಲಾಯಿತಂತೆ. ಹಣಸಂಗ್ರಹವಾಗುತ್ತ ಹೋದಷ್ಟೂ, ಅದನ್ನು ಪರೋಪಕಾರಕ್ಕಾಗಿ ಖರ್ಚುಮಾಡುವ ಪ್ರವೃತ್ತಿ ಕಡಮೆಯಾಗುತ್ತ ಹೋಗುತ್ತದೆ. ಬಡವರ ಉದ್ಧಾರಕ್ಕಾಗಿಯೇ ಇರುವ ಸಂಸ್ಥೆಗಳನ್ನು ನಡೆಸುವವರೇ ಹಣದ ಬಲಿಪಶುಗಳಾಗಿ, ಹೆಚ್ಚು ಹೆಚ್ಚು ಹಣ ಸಂಗ್ರಹಿಸಿಡುವ ಗೀಳಿನಿಂದಾಗಿ, ಬಡವರ ಕಷ್ಟಕ್ಕೆ ಸ್ಪಂದಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ.

"ಪರ್ಸ್ ಖಾಲಿಯಾದಷ್ಟೂ ಹೃದಯ ತುಂಬುತ್ತದೆ" ಎಂದು ವಿಕ್ಟರ್ ಹ್ಯೂಗೋ ಹೇಳುತ್ತಾರೆ. ಅದೇ ರೀತಿ ನಮ್ಮ ಪರ್ಸ್ ತುಂಬಿದಷ್ಟೂ ಹೃದಯ ಬರಡಾಗುತ್ತದೆ. ತುಂಬಿದ ಪರ್ಸ್ ಸಮಾಜದ 'ಕರ್ಸ್' ಆಗುತ್ತದೆ. ಕೆಲವರಲ್ಲಿ ಹಣ ಸಂಗ್ರಹವಾಗುವುದು ಇತರರಿಗಾಗಿ ಹಂಚುವುದಕ್ಕಾಗಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಆದರೆ ಹಾಗೆ ಮಾಡದೆ ಅನೇಕರು ದೇಶದ ಆರ್ಥಿಕ ಅಭಿವೃದ್ಧಿಯನ್ನು ಕುಂಠಿಸುವುದು ಮಾತ್ರವಲ್ಲದೆ ತಾವೂ ನಿಃಸಾರ್ಥಕ ಬಾಳನ್ನು ಬದುಕುತ್ತಾರೆ. ನೀಡುವುದರಲ್ಲಿಯೇ ಸಫಲತೆಯ ಭಾವವುಂಟಾಗುತ್ತದೆ ಎಂಬುದನ್ನು ಅವರು ತಿಳಿಯರು. ಸಫಲತೆಯ ಭಾವದಿಂದ ವಂಚಿತರಾಗುವುದೇ ಜೀವನದ ವಿಫಲತೆ.

❖

## ಸ್ಮಶಾನ ಸೇವೆ

ನಾವು ನಾಗರಿಕತೆಯಲ್ಲಿ ಮುಂದುವರೆಯುತ್ತಿದ್ದೇವೆಯೇ? ನಾವು ಹೆಚ್ಚು ಹೆಚ್ಚು ಉತ್ತಮರಾಗುತ್ತಿದ್ದೇವೆಯೆ? ನಮ್ಮ ರಾಕ್ಷಸೀ ಸ್ವಭಾವವನ್ನು ಮೀರಿ ಹೆಚ್ಚು ದೈವೀ ಪುರುಷರಾಗುತ್ತಿದ್ದೇವೆಯೆ? ಸೃಷ್ಟಿಯಲ್ಲೆಲ್ಲ ಮಾನವನೇ ಸರ್ವಶ್ರೇಷ್ಠ ಎಂಬ ಮಾತಿಗೆ ಅನುರೂಪವಾಗಿ ನಾವು ಮುಂದುವರಿಯುತ್ತಿದ್ದೇವೆಯೆ? ಇಂದಿನ ವಿದ್ಯಮಾನಗಳನ್ನೆಲ್ಲ ವೀಕ್ಷಿಸಿದರೆ ನಮಗೆ ಹಾಗನಿಸುವುದಿಲ್ಲ. ಮಾನವನು ಮೃತ್ಯುಮುಖ ಧಾವಿಸುತ್ತಿರುವಂತೆ ಕಂಡುಬರುತ್ತಿದೆ. ಭಗವದ್ಗೀತೆಯ ಈ ಅರ್ಥದ ಶ್ಲೋಕ ನೆನಪಿಗೆ ಬರುತ್ತದೆ : "ಹೇಗೆ ಪತಂಗಗಳು ಉರಿಯುತ್ತಿರುವ ಬೆಂಕಿಯನ್ನು ಅತಿ ವೇಗದಿಂದ ಪ್ರವೇಶಿಸಿ ನಾಶ ಹೊಂದುತ್ತವೆಯೊ, ಹಾಗೆಯೇ ಜನರೆಲ್ಲರೂ ಕೂಡ ಅತಿವೇಗದಿಂದ ನಿನ್ನ ಮುಖವನ್ನು ಪ್ರವೇಶಿಸಿ ನಾಶ ಹೊಂದುತ್ತಿದ್ದಾರೆ."

ಪ್ರೀತಿಯ ಪ್ರತಿರೂಪವೆಂದು ನಾವು ತಾಯಿಯನ್ನು ಆರಾಧಿಸುತ್ತೇವೆ. ಅಂಥ ತಾಯಂದಿರೇ ತಮ್ಮ ಒಡಲ ಎಳೆಗೂಸನ್ನು ಪರಿತ್ಯಜಿಸುವುದು, ಬಟ್ಟೆಯಲ್ಲಿ ಸುತ್ತಿ ತೊಟ್ಟಿಯಲ್ಲಿ ಎಸೆಯುವುದು, ಕಿಟಕಿಯಿಂದ ಬೀದಿಗೆ ಬಿಸಾಕುವುದು, ಹೆದ್ದಾರಿಗಳಲ್ಲಿ ಎಸೆದು ಹೋಗುವುದು ಮುಂತಾದ ಪ್ರಸಂಗಗಳು ನಾವು ನಾಗರಿಕ ಜನಾಂಗ ಎಂಬುದನ್ನು ಸೂಚಿಸುವುದಿಲ್ಲ. ಇದು ಭಾರತದಂತಹ ಬಡ ಅಥವಾ ಆರ್ಥಿಕವಾಗಿ ಹಿಂದುಳಿದಿರುವ ದೇಶದಲ್ಲಿ ಮಾತ್ರ ನಡೆಯುತ್ತಿಲ್ಲ. ಅಮೆರಿಕದಂತಹ ಸಂಪದ್ಭರಿತ ದೇಶದಲ್ಲಿಯೂ ನಡೆಯುತ್ತಿದೆ. ಅಲ್ಲಿ ಇಂತಹ ಮೃತ ಶಿಶುಗಳನ್ನು ತೆಗೆದುಕೊಂಡು ಹೋಗಿ ಅವುಗಳಿಗೆ ಶಾಸ್ತ್ರೋಕ್ತ ರೀತಿಯಲ್ಲಿ ಶವಸಂಸ್ಕಾರ ನೀಡುವ ಒಂದು ಸಂಸ್ಥೆಯಿದೆ. ಅದನ್ನು ಪ್ರಾರಂಭಿಸಿದವಳು ದೇಬಿ ಫರಿಸ್(Debi Faris). ಆಕೆ ನಿಜವಾಗಿಯೂ ದೇವಿಯೇ! ತನ್ನ ಹಣವನ್ನೂ ತೆತ್ತು, ಜನರಿಂದ ದೇಣಿಗೆಯನ್ನೂ ಪಡೆದು ಈ ಕಾರ್ಯಕ್ಕಾಗಿಯೇ ಒಂದು ಸ್ಮಶಾನ ಭೂಮಿಯನ್ನು ಖರೀದಿಸಿದ್ದಾಳೆ. ಅದರ ಹೆಸರು Garden of Angels (ದೇವತೋದ್ಯಾನ). ಎಲ್ಲೇ ಆದರೂ ಈ ರೀತಿ ಪರಿತ್ಯಕ್ತ ಮೃತ ಶಿಶುವಿನ ಸುದ್ದಿ ಸಿಕ್ಕಿದರೂ ಕೂಡಲೆ ಆ ಶಿಶುವನ್ನು ತನ್ನ ವಶಕ್ಕೆ ತೆಗೆದುಕೊಂಡು ಅದಕ್ಕೆ ಶವಸಂಸ್ಕಾರವನ್ನು ನೀಡುತ್ತಾಳೆ.

ಈ ರೀತಿ ಶಿಶುವನ್ನು ಎಸೆದು, ಸಾಯಿಸಿ, ತಲೆ ಮರೆಸಿಕೊಂಡು ಹೋಗುವ ಬದಲು ತಮಗೆ ಬೇಡವಾದ ಶಿಶುವನ್ನು ಸರಿಯಾದ ರೀತಿಯಲ್ಲಿ ಬಿಟ್ಟುಹೋಗಲು ಅವಕಾಶ ನೀಡುವ ಶಾಸನ ಅಲ್ಲಿಯ ಕೆಲವು ರಾಜ್ಯಗಳಲ್ಲಿ ಇವೆಯಂತೆ. ಕ್ಯಾಲಿಫೋರ್ನಿಯಾದಲ್ಲಿಯೂ ಆ ಶಾಸನ ಜಾರಿಗೆ ಬರುವಂತೆ ಶ್ರಮಿಸಿದವಳು ಈ ಧೀರ ಮಹಿಳೆ. ಇದರಿಂದ ಶಿಶುಹತ್ಯೆಯಾದರೂ ತಪ್ಪಿದಂತಾಯಿತು. ಈ ಶಾಸನದ ಇರುವಿಕೆಯನ್ನು ಜನರಿಗೆ ತಿಳಿಸಿಕೊಡಲು ಆಕೆ ಊರೂರು ಸುತ್ತುತ್ತಿದ್ದಾಳಂತೆ. ಅನೇಕ ತಾಯಂದಿರ ಮಾತೃಪ್ರೇಮ ಆಕೆಯಲ್ಲಿ ಸೇರಿಕೊಂಡಂತಿದೆ.

❖